


# ಸಂಭ್ರಮದ ಸ್ವಾತಂತ್ರ್ಯಕ್ಕೆ ಸಾಧನೆಗಳ ಸಾರಥ್ಯ







**ಸರ್ವರಿಗೂ 64ನೇ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು**

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ನಮ್ಮ ಸ್ವತಂತ್ರ ಭಾರತಕ್ಕೀಗ 63 ವರ್ಷಗಳು, ಅದಕ್ಕೂ ಮುಂಚೆ ದಾಸ್ಯದ ಸಂಕೋಲೆಗೆ ಸಿಲುಕಿದ್ದ ಈ ಭವ್ಯ ಭಾರತವನ್ನು "ಸಾರ್ವಭೌಮ ಸ್ವತಂತ್ರ ರಾಷ್ಟ್ರ"ವನ್ನಾಗಿ ರೂಪಿಸಿದ ಕೀರ್ತಿ ಮಹಾತ್ಮಾ ಗಾಂಧಿ, ಭಗತ್‌ಸಿಂಗ್, ಕಿತ್ತೂರುರಾಣಿ ಚೆನ್ನಮ್ಮ, ಸುಭಾಷ್‌ಚಂದ್ರ ಬೋಸ್, ಪಂಡಿತ್ ನೆಹರು, ಝಾನ್ಸಿರಾಣಿ ಲಕ್ಷ್ಮೀಬಾಯಿ, ಸಂಗೊಳ್ಳಿ ರಾಯಣ್ಣ ಅವರಂತಹ ಅಸಂಖ್ಯಾತ ದೇಶಭಕ್ತರಿಗೆ ಸಲ್ಲುತ್ತದೆ.

ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಈ ಮಹಾನ್ ಚೇತನಗಳ ತನು, ಮನ, ಧನ ಮತ್ತು ತ್ಯಾಗ ಬಲಿದಾನಗಳ ಅಮರ ಜ್ಯೋತಿಯ ಬೆಳಕಲ್ಲಿ ಭಾರತದ ತ್ರಿವರ್ಣ ಧ್ವಜ ರಾರಾಜಿಸುತ್ತಿದೆ.

ಸತ್ಯ, ಅಹಿಂಸೆ, ಸೌಹಾರ್ದತೆಗಳಿಗೆ ಸ್ಫೂರ್ತಿಯ ಸೆಲೆಯಾಗಿರುವ ನಮ್ಮ ಸ್ವಾತಂತ್ರ್ಯೋತ್ಸವದ ಈ ಸುದಿನದಂದು ಆ ಎಲ್ಲ ದಿವ್ಯ ಚೇತನಗಳಿಗೆ ಗೌರವ ನಮನ ಸಲ್ಲಿಸೋಣ.

ಸ್ವಾತಂತ್ರ್ಯದ ಮಹತ್ವವನ್ನು ಅರಿತು ನಾಡನ್ನು ಅದ್ಭುತ ಅಭಿವೃದ್ಧಿಯತ್ತ ಮುನ್ನಡೆಸೋಣ.

**ರೈತರಿಗೆ ನೆರವು** • ಶೇ. 3ರ ಬಡ್ಡಿ ದರದಲ್ಲಿ ರೈತರಿಗೆ, ನೇಕಾರರಿಗೆ, ಮೀನುಗಾರರಿಗೆ ಸಹಕಾರ ಸಂಘಗಳಿಂದ ಸಾಲ ಸೌಲಭ್ಯ • ವಾಣಿಜ್ಯ ಬ್ಯಾಂಕುಗಳಿಂದ ಶೇ. 3 ರ ಬಡ್ಡಿ ದರದಲ್ಲಿ ಬೆಳೆ ಸಾಲ ವಿತರಣೆ.

**ಮೀನುಗಾರರಿಗೆ ಉತ್ತೇಜನ** • ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಮೀನುಮರಿ ಉತ್ಪಾದನೆಗಾಗಿ 2.50 ಕೋಟಿ ರೂ. ವೆಚ್ಚ • ಬೈಂದೂರಿನ ಕೊಡೇರಿ ಮೀನುಗಾರಿಕೆ ಬಂದರಿನ ಅಭಿವೃದ್ಧಿಗಾಗಿ 10 ಕೋಟಿ ರೂ. ನೀಡಿಕೆ.

**ಶಿಕ್ಷಣಕ್ಕೆ ಮಹತ್ವ** • 6,700 ವಿದ್ಯಾರ್ಥಿಗಳಿಗೆ 1.50 ಕೋಟಿ ರೂ. ಸಂಚಿ ಹೊನ್ನಮ್ಮ ಮತ್ತು ಸರ್. ಸಿ.ವಿ ರಾಮನ್ ವಿದ್ಯಾರ್ಥಿ ವೇತನ ನೀಡಿಕೆ • 2821 ಪ್ರೌಢಶಾಲಾ ಮತ್ತು 4928 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ.

**ಉನ್ನತ ಶಿಕ್ಷಣ** • ಉನ್ನತ ಶಿಕ್ಷಣ ಸಾಲದ ಬಡ್ಡಿಗೆ ಸಹಾಯಧನ, 2 ಕೋಟಿ ರೂ. ಬಿಡುಗಡೆ • 2385 ಪದವಿ ಪೂರ್ವ ಕಾಲೇಜು ಉಪನ್ಯಾಸಕರ ನೇಮಕಾತಿ • ವಿಜಾಪುರದ ಕರ್ನಾಟಕ ಮಹಿಳಾ ವಿವಿಯಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 5 ಕೋಟಿ ರೂ. ನೀಡಿಕೆ.

**ಕ್ಷೀರ ಪ್ರೋತ್ಸಾಹ** • ಹೈನುಗಾರಿಕೆ ಅಭಿವೃದ್ಧಿಗಾಗಿ – ಪ್ರತಿ ಲೀಟರ್ ಹಾಲಿಗೆ 4.50 ರೂ. ಪ್ರೋತ್ಸಾಹ ಧನ.

**ನಮ್ಮ ಮನೆಯ ಭಾಗ್ಯಲಕ್ಷ್ಮಿ** • ಭಾಗ್ಯಲಕ್ಷ್ಮಿ ಯೋಜನೆ ಅಂತಿಮ ಠೇವಣಿ ಮೊತ್ತ ರೂ. ಒಂದು ಲಕ್ಷಕ್ಕೆ ಏರಿಕೆ. 8 ಲಕ್ಷಕ್ಕೂ ಹೆಚ್ಚು ಹೆಣ್ಣು ಮಕ್ಕಳಿಗೆ ಪ್ರಯೋಜನ.

**ಆರೋಗ್ಯ ಸಂಜೀವಿನಿ** • ಗ್ರಾಮೀಣ ಜನರಿಗಾಗಿ 'ಆರೋಗ್ಯ ಕವಚ – 108' ಯೋಜನೆ ಜಾರಿ • ಉತ್ತರ ಕರ್ನಾಟಕದ 6 ಜಿಲ್ಲೆಗಳ 14.5 ಲಕ್ಷ ಬಿಪಿಎಲ್ ಕುಟುಂಬಗಳಿಗೆ 2 ಲಕ್ಷ ರೂ. ವರೆಗೆ ಉಚಿತ ಚಿಕಿತ್ಸೆ / ಶಸ್ತ್ರಚಿಕಿತ್ಸೆಗಾಗಿ 'ವಾಜಪೇಯಿ ಆರೋಗ್ಯಶ್ರೀ ಯೋಜನೆ'ಗೆ ಚಾಲನೆ.

**ನಮ್ಮ ಜಲ ನಮ್ಮ ಬಲ** • 52 ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 2689 ಕೋಟಿ ರೂ. ವೆಚ್ಚ • ತುಂಗಭದ್ರಾ ಎಡದಂಡೆ ನಾಲೆ ಹಾಗೂ ತುಂಗಭದ್ರಾ ಯೋಜನೆ ವಿತರಣೆ ನಾಲೆಗಳ ಆಧುನೀಕರಣಕ್ಕೆ 196 ಕೋಟಿ ರೂ. ವೆಚ್ಚ • 300 ಕೋಟಿ ರೂ. ವೆಚ್ಚದಲ್ಲಿ 29 ಕೆರೆಗಳ ಅಭಿವೃದ್ಧಿ.

**ಸಣ್ಣ ನೀರಾವರಿ** • ವಿಶ್ವ ಬ್ಯಾಂಕ್ ನೆರವಿನ ಜಲಸಂವರ್ಧನಾ ಯೋಜನೆಯಡಿ 319 ಕೋಟಿ ರೂ. ವೆಚ್ಚದಲ್ಲಿ 3,877 ಕೆರೆಗಳ ಪುನರುಜ್ಜೀವನ • ಕಾಮಗಾರಿಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಲು ಗುಣಮಟ್ಟ ನಿಯಂತ್ರಣ ಘಟಕ ಸ್ಥಾಪನೆ.

ಅಭಿವೃದ್ಧಿಯೇ ಆಡಳಿತ ಮಂತ್ರ

ಕರ್ನಾಟಕ ವಾರ್ತೆ